# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:15-03-2023ರಂದು ಬುಧವಾರ ಪೂರ್ವಾಹ್ನ 11-00 ಘಂಟೆಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣದಲ್ಲಿ ನಡೆದ 2022-23ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು: | ಪದನಾಮ |
|---|---|
| 1. ಪ್ರೊ. ಬಿ.ಪಿ. ವೀರಭದ್ರಪ್ಪ<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. ಶ್ರೀಮತಿ ಉಮಾ. ಕೆ<br>ಉಪ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 3. ಶ್ರೀ ನರಸಿಂಹಪ್ಪ ಕೆ.ಎ.ಎಸ್<br>ಸರ್ಕಾರದ ಜಂಟಿ ಕಾರ್ಯದರ್ಶಿಗಳು<br>(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. ಶ್ರೀ ಗುರುರಾಜ್ ರಾವ್<br>ಹಿರಿಯ ನಿರ್ದೇಶಕರು ಹಾಗೂ<br>ಪದನಿಮಿತ್ತ ಜಂಟಿ ಕಾರ್ಯದರ್ಶಿ<br>ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 5. ಶ್ರೀ ಕುಮಾರೇಗೌಡ<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 6. ಪ್ರೊ. ಗೀತಾ.ಸಿ<br>ಕುಲಸಚಿವರು (ಆಡಳಿತ) | |
| 7. ಪ್ರೊ. ಎಸ್.ಕೆ. ನವೀನ್‌ಕುಮಾರ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 8.. ಪ್ರೊ. ರಾಮಚಂದ್ರ . ವೈ. ಎಲ್.<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

<u>ಪ್ರಸ್ತಾವನೆ:</u>

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು 2022-23ನೇ ಸಾಲಿನ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಗೆ ಆಗಮಿಸಿದ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಆತ್ಮೀಯವಾಗಿ ಸ್ವಾಗತ ಕೋರಿ, ಕಾರ್ಯಸೂಚಿಯ ಪ್ರಮುಖ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| **2022-ಹಸ:3:01:** | **ದಿನಾಂಕ:19-10-2022, 17-11-2022 ಹಾಗೂ 09-01-2023ರಂದು ನಡೆದ 2022-23ನೇ ಹಣಕಾಸು ವರ್ಷದ ದ್ವಿತೀಯ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.** |
| ನಿರ್ಣಯ: | ದಿನಾಂಕ:19-10-2022, 17-11-2022 ಹಾಗೂ 09-01-2023ರಂದು ನಡೆದ 2022-23ನೇ ಹಣಕಾಸು ವರ್ಷದ ದ್ವಿತೀಯ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| **2022-ಹಸ:3:02:** | **ದಿನಾಂಕ:19-10-2022, 17-11-2022 ಹಾಗೂ 09-01-2023ರಂದು ನಡೆದ 2022-23ನೇ ಹಣಕಾಸು ವರ್ಷದ ದ್ವಿತೀಯ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.** |
| ನಿರ್ಣಯ: | ದಿನಾಂಕ:19-10-2022, 17-11-2022 ಹಾಗೂ 09-01-2023ರಂದು ನಡೆದ 2022-23ನೇ ಹಣಕಾಸು ವರ್ಷದ ದ್ವಿತೀಯ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು. |
| **2022-ಹಸ:3:03:** | **2023-24ನೇ ಆರ್ಥಿಕ ವರ್ಷದ ಆಯ-ವ್ಯಯ ಅಂದಾಜು ಅನುಮೋದನೆ ಕುರಿತು.** |
| ಚರ್ಚೆ: | ಆಯ-ವ್ಯಯವನ್ನು ಮಂಡಿಸುವ ಪೂರ್ವದಲ್ಲಿ ಹಣಕಾಸು ಅಧಿಕಾರಿಗಳು ಘನ ಸರ್ಕಾರದಿಂದ 2022-23ನೇ ಸಾಲಿಗೆ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿರುವುದಕ್ಕೆ ವಿಶ್ವವಿದ್ಯಾಲಯದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.<br><br>2023-24ನೇ ಆರ್ಥಿಕ ವರ್ಷದ ಅಂದಾಜು ಆಯ-ವ್ಯಯದ ಬಗ್ಗೆ ಸಭೆಗೆ ಅಂಕಿ-ಅಂಶಗಳೊಂದಿಗೆ ವಿವರಿಸಿದರು. ಸದರಿ ಆಯ-ವ್ಯಯದ ಮೇಲೆ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಯಿತು. ಮಾನ್ಯ ಕುಲಪತಿಗಳು ಮಾತನಾಡಿ, ಅತಿಥಿ ಉಪನ್ಯಾಸಕರು ಹಾಗೂ ಹೊರಗುತ್ತಿಗೆ ನೌಕರರ ವೇತನಗಳಿಗೆ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸಬೇಕೆಂದು ಮನವಿ ಮಾಡಿದರು.<br><br>ಈ ಕುರಿತು ಸನ್ಮಾನ್ಯ ಸದಸ್ಯರುಗಳಾದ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಉಪ ಕಾರ್ಯದರ್ಶಿಗಳು ಮಾತನಾಡಿ, 2023-24ನೇ ಸಾಲಿಗೆ ಚಿಕ್ಕಮಗಳೂರು ಜಿಲ್ಲೆಗೆ ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರವು ತನ್ನ ಆಯ-ವ್ಯಯದಲ್ಲಿ ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಕಾರ್ಯಭಾರಕ್ಕೆ ಅನುಗುಣವಾಗಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಮಾತ್ರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಸಭೆಗೆ ಸೂಚಿಸಿದರು. ಮತ್ತು ಖಾಲಿ ಇರುವ ಅಧ್ಯಾಪಕ ಹುದ್ದೆಗಳಿಗೆ ಅನುಸಾರವಾಗಿ ಕಾರ್ಯಭಾರವನ್ನು ಹಂಚಿಕೆ ಮಾಡಿಕೊಳ್ಳಲು ಹಾಗೂ ಅತಿಥಿ ಉಪನ್ಯಾಸಕರುಗಳ ಕಾರ್ಯಭಾರವನ್ನು ಮರುಪರಿಶೀಲಿಸುವಂತೆ ಸಲಹೆ ನೀಡಿದರು. |

| | |
|---|---|
| | ಸರ್ಕಾರದ ಜಂಟಿ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಇವರು ಸುದೀರ್ಘ ಚರ್ಚೆಯ ನಂತರ ನಿಯಮಾನುಸಾರ ವಿಶ್ವವಿದ್ಯಾಲಯಕ್ಕೆ ಮಂಜೂರಾದ ಅಧ್ಯಾಪಕ ಹಾಗೂ ಅಧ್ಯಾಪಕೇತರ ಹುದ್ದೆಗಳಿಗೆದುರಾಗಿ ಕಾರ್ಯಭಾರವನ್ನು ಹಂಚಿಕೆ ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಹಾಗೂ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಅನುದಾನದ ಕುರಿತು ಸಂಬಂಧಿಸಿದ ಇಲಾಖೆಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಿಳಿಸಿದರು.<br><br>ಸರ್ಕಾರದ ಜಂಟಿ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಇವರು ಮಾತನಾಡಿ, ಎಸ್.ಸಿ.ಪಿ./ ಟಿ.ಎಸ್.ಪಿ. ಯೋಜನೆಗೆ ಅನುದಾನ ಕೋರಿ ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸಹ ಸೂಚಿಸಿದರು. |
| | ಸರ್ಕಾರದ ಪ್ರತಿನಿಧಿಗಳು ಪರಿನಿಯಮಗಳ ಅನುಮೋದನೆ ಇಲ್ಲದೆ ಆಂತರಿಕ ಸಂಪನ್ಮೂಲದ ಆಧಾರದ ಮೇಲೆ ನಡೆಸಲಾಗುತ್ತಿರುವ ಅಧ್ಯಯನ ವಿಭಾಗಗಳ ಸಂಪೂರ್ಣ ಅಂಕಿ–ಅಂಶಗಳನ್ನು ಸೂಕ್ತ ದಾಖಲೆಗಳೊಂದಿಗೆ ಪರಿನಿಯಮಗಳ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸುವಂತೆ ಸಲಹೆ ನೀಡಿದರು.<br><br>ಮಾನ್ಯ ಕುಲಸಚಿವರು ಮಾತನಾಡಿ, ಈ ಬಾರಿ ಅಭಿವೃದ್ಧಿ ಅನುದಾನವನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ನೀಡದಿರುವ ಬಗ್ಗೆ ಪ್ರಸ್ತಾಪಿಸಿದರು. ವಿವಿಧ ಕಟ್ಟಡಗಳ ವಾರ್ಷಿಕ ನಿರ್ವಹಣೆ ಮತ್ತು ಮುಂದುವರಿದ ಕಾಮಗಾರಿಗಳಿಗೆ ಅನುದಾನದ ಅವಶ್ಯಕತೆ ಇರುವ ಬಗ್ಗೆ ಹಾಗೂ ಸೆಪ್ಟಂಬರ್–2023ಕ್ಕೆ ನ್ಯಾಕ್ ಶ್ರೇಣಿ ಪಡೆಯಲು ಕ್ರಮಕೈಗೊಳ್ಳಬೇಕಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಈ ಕುರಿತು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಉಪ ಕಾರ್ಯದರ್ಶಿಗಳು ಮಾತನಾಡಿ, ಈ ಬಾರಿ ಯಾವುದೇ ಆಂತರಿಕ ಸಂಪನ್ಮೂಲ ಇಲ್ಲದಿರುವ ವಿಶ್ವವಿದ್ಯಾಲಯಗಳಿಗೆ ಮಾತ್ರ ಅಭಿವೃದ್ಧಿ ಅನುದಾನವನ್ನು ನೀಡಲಾಗಿದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.<br><br>ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದ ಕೊರತೆ, ಖರ್ಚು–ವೆಚ್ಚಗಳ ಬಗ್ಗೆ ಹಾಗೂ ಖೋತಾ ಆಯ–ವ್ಯಯಕ್ಕೆ ಕಾರಣಗಳನ್ನು ಸಭೆಗೆ ಹಣಕಾಸು ಅಧಿಕಾರಿಗಳು ತಿಳಿಸಿದರು. ನಂತರ, ಸಭೆಯು ರೂ.12838.56 ಲಕ್ಷಗಳ ಸ್ವೀಕೃತಿಗೆ ಅನುಗುಣವಾಗಿ ರೂ.13083.14 ಲಕ್ಷಗಳ ವೆಚ್ಚಕ್ಕೆ ರೂ.244.58 ಲಕ್ಷಗಳ ಖೋತಾ ಆಯ–ವ್ಯಯಕ್ಕೆ ಅನುಮೋದನೆ ನೀಡಿತು ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಕಡಿತಗೊಳಿಸಿ, ಸಮರ್ಪಕ ಹಣಕಾಸು ನಿರ್ವಹಣೆಯನ್ನು ಮಾಡಬೇಕೆಂದು ಹಣಕಾಸು ಅಧಿಕಾರಿಗಳಿಗೆ ಸಭೆಯು ಸೂಚಿಸಿತು. |
| ನಿರ್ಣಯ: | ಸುದೀರ್ಘ ಚರ್ಚೆಯ ನಂತರ, ಸನ್ಮಾನ್ಯ ಸದಸ್ಯರುಗಳು ನೀಡಿದ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನಗಳ ಅನುಸಾರ ಕ್ರಮಕೈಗೊಳ್ಳಲು ತಿಳಿಸಿ, ವಿಶ್ವವಿದ್ಯಾಲಯದ 2023–24ನೇ ಸಾಲಿನ ಆರ್ಥಿಕ ವರ್ಷದ ಅಂದಾಜು ಆಯ–ವ್ಯಯವನ್ನು ಸಭೆಯು ಅನುಮೋದಿಸಿತು. |
| **2022–ಹಸ:3:04:** | **2022–23ನೇ ಆರ್ಥಿಕ ವರ್ಷದ ಏಪ್ರಿಲ್–2022 ರಿಂದ ಸೆಪ್ಟೆಂಬರ್–2022ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ಅನುಮೋದನೆ ಕುರಿತು.** |
| ಚರ್ಚೆ: | 2022–23ನೇ ಆರ್ಥಿಕ ವರ್ಷದ ವೇತನ ಮತ್ತು ಭತ್ಯೆಗಳು/ ಪಿಂಚಣಿ/ ಇತರೆ ಖಾತೆಗಳಿಗೆ ಸ್ವೀಕೃತಗೊಂಡಿರುವ ಮತ್ತು ವೆಚ್ಚಗಳಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. |

| | |
|---|---|
| ನಿರ್ಣಯ: | ಸಭೆಯು ಸ್ವೀಕೃತಿ ಮತ್ತು ವೆಚ್ಚಗಳ ವಿವರಗಳನ್ನು ಅವಗಾಹಿಸಿ, 2022–23ನೇ ಆರ್ಥಿಕ ವರ್ಷದ ಏಪ್ರಿಲ್–2022 ರಿಂದ ಸೆಪ್ಟಂಬರ್–2022ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಗಮನಿಸಿತು. |
| **2022–ಹಸ:3:05:** | **ಕುವೆಂಪು ವಿಶ್ವವಿದ್ಯಾನಿಲಯದ 2023–2024ನೇ ಸಾಲಿನ ವೇತನ ಭತ್ಯೆಗಳಿಗೆ ಸಂಬಂಧಿಸಿದ ಅಂದಾಜು ಆಯ–ವ್ಯಯದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವ ಕುರಿತು.** |
| ಚರ್ಚೆ: | ವಿಶ್ವವಿದ್ಯಾಲಯದ 2023–24ನೇ ಸಾಲಿನ ವೇತನ ಭತ್ಯೆಗಳಿಗೆ ಸಂಬಂಧಿಸಿದ ಅಂದಾಜು ಆಯ–ವ್ಯಯದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದರ ಕುರಿತು ಸಭೆಯ ಗಮನಕ್ಕೆ ತರಲಾಯಿತು. |
| ನಿರ್ಣಯ: | ಕುವೆಂಪು ವಿಶ್ವವಿದ್ಯಾನಿಲಯದ 2023–2024ನೇ ಸಾಲಿನ ವೇತನ ಭತ್ಯೆಗಳಿಗೆ ಸಂಬಂಧಿಸಿದ ಅಂದಾಜು ಆಯ–ವ್ಯಯದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದನ್ನು ಸಭೆಯು ಗಮನಿಸಿತು. |
| **2022–ಹಸ:3:06:** | **2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು.** |
| ಚರ್ಚೆ: | 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿತು. ಬಾಕಿ ಇರುವ ಕಂಡಿಕೆಗಳಿಗೆ ತುರ್ತಾಗಿ ಅಡ್–ಹಾಕ್ ಸಮಿತಿ ಸಭೆಯನ್ನು ಏರ್ಪಡಿಸಿ ಇತ್ಯರ್ಥಪಡಿಸಲು ಸಭೆಯು ಸೂಚಿಸಿತು. |
| ನಿರ್ಣಯ: | 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು. ಸದರಿ ವರದಿಗಳನ್ನು ಮುಂದಿನ ಸಕ್ಷಮ ಪ್ರಾಧಿಕಾರಗಳ ಸಭೆಯಲ್ಲಿ ಅನುಮೋದನೆ ಪಡೆದು ತುರ್ತಾಗಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಸೂಚಿಸಿತು. |
| **2022–ಹಸ:3:07:** | **ಕಾರು ಮೈಲೇಜು ದರ ನಿಗದಿಪಡಿಸುವ ಕುರಿತು.** |
| ಚರ್ಚೆ: | ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಗಳಿಗೆ ಹಾಜರಾಗುವ ಬಾಹ್ಯ ಸದಸ್ಯರುಗಳಿಗೆ ಪ್ರತಿ ಕಿ.ಮೀ. ಗೆ ಪ್ರಸ್ತುತವಿರುವ ಕಾರು ಮೈಲೇಜು ದರಕ್ಕೆ ಸಂಬಂಧಿಸಿದಂತೆ, ಬೇರೆ ವಿಶ್ವವಿದ್ಯಾಲಯಗಳಲ್ಲಿ ನಿಗದಿಪಡಿಸಿರುವ ಕಾರು ಮೈಲೇಜು ದರಗಳ ಬಗ್ಗೆ ಮಾಹಿತಿ ಪಡೆದು, ಕೆ.ಸಿ.ಎಸ್. ನಿಯಮಗಳ ಪ್ರಕಾರ ಪ್ರತಿ ಕಿ.ಮೀ. ಗೆ ದರ ನಿಗದಿಪಡಿಸಲು ಸೂಚಿಸಿದರು. ಈ ಸೂಚನೆಗೆ ಸನ್ಮಾನ್ಯ ಸದಸ್ಯರುಗಳು ಸಮ್ಮತಿಯನ್ನು ವ್ಯಕ್ತಪಡಿಸಿದರು. |
| ನಿರ್ಣಯ: | ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಗಳಿಗೆ ಹಾಜರಾಗುವ ಬಾಹ್ಯ ಸದಸ್ಯರುಗಳಿಗೆ ಕಾರು ಮೈಲೇಜು ದರವನ್ನು, ಬೇರೆ ವಿಶ್ವವಿದ್ಯಾಲಯಗಳಲ್ಲಿ ನಿಗದಿಪಡಿಸಿರುವ ದರಗಳ ಬಗ್ಗೆ ಮಾಹಿತಿ ಪಡೆದು, ಕೆ.ಸಿ.ಎಸ್. ನಿಯಮಗಳ ಪ್ರಕಾರ ಕಾರು ಮೈಲೇಜು ದರವನ್ನು ಪ್ರತಿ ಕಿ.ಮೀ. ಗೆ ನಿಗದಿಪಡಿಸಲು ಸಭೆಯು ನಿರ್ಣಯಿಸಿತು. |
| **2022–ಹಸ:3:08** | **STATUTES RELATING TO ESTABLISHMENT OF POST-GRADUATE DEPARTMENT OF FOOD TECHNOLOGY IN KUVEMPU UNIVERSITY AND INSTITUTION OF POSTS IN THE DEPARTMENT - ಪರಿನಿಯಮ ಅನುಮೋದನೆ ಕುರಿತು.** |
| ಚರ್ಚೆ: | ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ವಿದ್ಯಾರ್ಥಿಗಳ ಬೇಡಿಕೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗವನ್ನು ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿರುವ ಬಗ್ಗೆ ವಿವರವಾಗಿ ಸಮಿತಿಯ ಸದಸ್ಯರುಗಳಿಗೆ ಮಾನ್ಯ ಕುಲಸಚಿವರು ಸಮರ್ಥನೆ ನೀಡಿ ಸದರಿ ಪರಿನಿಯಮವನ್ನು ಅನುಮೋದಿಸಲು ಕೋರಿದರು. |

| | |
|---|---|
| | ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಮತ್ತು ಹಿರಿಯ ನಿರ್ದೇಶಕರು ಹಾಗೂ ಪದನಿಮಿತ್ತ ಜಂಟಿ ಕಾರ್ಯದರ್ಶಿ, ಯೋಜನಾ ಇಲಾಖೆ ಇವರುಗಳು ಸದರಿ ಅಧ್ಯಯನ ವಿಭಾಗದ ಸಂಪೂರ್ಣ ಮಾಹಿತಿ, ಕಾರ್ಯನಿರ್ವಹಣೆ ಹಾಗೂ ಕಳೆದ ವರ್ಷಗಳ ಅಂಕಿ-ಅಂಶಗಳೊಂದಿಗೆ ಸಮರ್ಥನೆ ನೀಡಿ ವಿವರವಾದ ಪ್ರಸ್ತಾವನೆಯೊಂದಿಗೆ ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದರು. |
| ನಿರ್ಣಯ: | ದೀರ್ಘ ಚರ್ಚೆಯ ನಂತರ ಸಭೆಯು **ESTABLISHMENT OF POST-GRADUATE DEPARTMENT OF FOOD TECHNOLOGY IN KUVEMPU UNIVERSITY AND INSTITUTION OF POSTS IN THE DEPARTMENT** ' – ಈ ಪರಿನಿಯಮವನ್ನು ಅನುಮೋದಿಸಿತು. |
| **2022–ಹಸ:3:09:** | **STATUTES GOVERNING ESTABLISHIMENT OF FELLOWSHIPS - ಪರಿನಿಯಮ ಅನುಮೋದನೆ ಕುರಿತು.** |
| ಚರ್ಚೆ: | ಮಾನ್ಯ ಕುಲಸಚಿವರು, ಸದರಿ ಪರಿನಿಯಮವು ಪರಿಷ್ಕೃತ ಪರಿನಿಯಮವೆಂದು ಸಭೆಯ ಗಮನಕ್ಕೆ ತಂದರು. ಚರ್ಚೆಯ ನಂತರ ಸಭೆಯು ಸದರಿ ಪರಿಷ್ಕೃತ ಪರಿನಿಯಮವು ಯಾವ ವರ್ಗದ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ ಎಂಬುದನ್ನು ಪರಿನಿಯಮದಲ್ಲಿ ಅಳವಡಿಸಲು ಸೂಚಿಸಿದರು. ಉಳಿದಂತೆ ಪರಿನಿಯಮದಲ್ಲಿ ಮಾಡಿರುವ ತಿದ್ದುಪಡಿಗಳನ್ನು ಮಾಡಲು ಸಭೆಯು ತಿಳಿಸಿತು. |
| ನಿರ್ಣಯ: | ಚರ್ಚೆಯಲ್ಲಿ ಸೂಚಿಸಿರುವಂತೆ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವ ಕುರಿತು ಸೂಚಿಸಿರುವ ತಿದ್ದುಪಡಿಗಳನ್ನು ಪರಿಷ್ಕೃತ ಪರಿನಿಯಮದಲ್ಲಿ ಅಳವಡಿಸಲು ಸಭೆಯು ನಿರ್ಣಯಿಸಿತು. |
| **2022–ಹಸ:3:10:** | **STATUTES GOVERNING THE ESTABLISHMENT OF BHARATHA RATNA DR. C.N.R RAO STUDY CENTER AT KUVEMPU UNIVERSITY AND THE INSTITUTION OF POSTS IN THE CENTRE - ಪರಿನಿಯಮ ಅನುಮೋದನೆ ಕುರಿತು.** |
| ಚರ್ಚೆ: | ಭಾರತ ರತ್ನ ಡಾ. ಸಿ.ಎನ್.ಆರ್. ರಾವ್ ಅಧ್ಯಯನ ಕೇಂದ್ರವನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಿದಲ್ಲಿ, ವಿಶ್ವವಿದ್ಯಾಲಯದ ಘನತೆಯ ಹೆಚ್ಚಳಕ್ಕೆ ಕಾರಣವಾಗುತ್ತದೆಯೆಂದು ಮಾನ್ಯ ಕುಲಪತಿಗಳು ಸಭೆಗೆ ವಿವರಿಸಿದರು. ಸರ್ಕಾರದ ಉಪ ಕಾರ್ಯದರ್ಶಿಗಳು (ಆರ್ಥಿಕ ಇಲಾಖೆ) ಇವರು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದ ಲಭ್ಯತೆಯ ಮೇರೆಗೆ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಒಪ್ಪಿಗೆ ಸೂಚಿಸಿದರು. ಹಾಗೂ ಸರ್ಕಾರದ ಜಂಟಿ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಇವರು ಮಾತನಾಡಿ ಸಿ.ಎನ್.ಆರ್. ಅನುದಾನಕ್ಕೆ ವಿವಿಧ ಅನುದಾನಿತ ಸಂಸ್ಥೆಗಳಿಗೆ (Funding Agencies) ಪ್ರಸ್ತಾವನೆ ಸಲ್ಲಿಸಿ, ಅನುದಾನವನ್ನು ಕ್ರೋಢೀಕರಿಸಲು ತಿಳಿಸಿದರು. |
| ನಿರ್ಣಯ: | ಚರ್ಚೆಯ ನಂತರ ESTABLISHMENT OF BHARATHA RATNA DR. C.N.R RAO STUDY CENTER AT KUVEMPU UNIVERSITY AND THE INSTITUTION OF POSTS IN THE CENTRE – ಪರಿನಿಯಮವನ್ನು ಸಭೆಯು ಅನುಮೋದಿಸಿತು. |
| **2022–ಹಸ:3:11:** | **2022–23ನೇ ಹಣಕಾಸು ವರ್ಷದ ಆಯ-ವ್ಯಯದ ಪುನರ್ ಧನವಿನಿಯೋಗ (ಮರುಹೊಂದಾಣಿಕೆ) ಮತ್ತು ಪೂರಕ ಅನುದಾನ ಕುರಿತು.** |
| ಚರ್ಚೆ: | 2022–23ನೇ ಹಣಕಾಸು ವರ್ಷದ ಆಯ-ವ್ಯಯದಲ್ಲಿ ನಿಗದಿಪಡಿಸಿದ ಶೀರ್ಷಿಕೆಗಳಲ್ಲಿ ಕೊರತೆ ಉಂಟಾಗಿರುವ ಮೊತ್ತವನ್ನು ಉಳಿತಾಯದ ಶೀರ್ಷಿಕೆಗಳಿಂದ ಅನುದಾನವನ್ನು ಪುನರ್ ಧನವಿನಿಯೋಗ (ಮರುಹೊಂದಾಣಿಕೆ) ಮಾಡಿಕೊಳ್ಳಲು ಮತ್ತು ಪೂರಕ ಅನುದಾನದ ಬಗ್ಗೆ ಚರ್ಚಿಸಲಾಯಿತು. |

| | |
|---|---|
| ನಿರ್ಣಯ: | ಚರ್ಚೆಯ ನಂತರ, ಪ್ರಪತ್ರ–22ಎ (ಅನುಚ್ಛೇದ–308, ಕೆ.ಎಫ್.ಸಿ.)ರ ಪ್ರಕಾರದಂತೆ ಸಭೆಗೆ ಮಂಡಿಸಿದ್ದ ಒಟ್ಟು ಮೊತ್ತ ರೂ.39,78,461–00ಗಳನ್ನು ಪುನರ್ಧನ ವಿನಿಯೋಗ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು. |
| 2022–ಹಸ:3:12: | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.** |
| | – ಯಾವುದೂ ಇರುವುದಿಲ್ಲ – |

**ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.**

Ramchand 23.03.23
(ಪ್ರೊ. ವೈ.ಎಲ್. ರಾಮಚಂದ್ರ)
**ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು**

ಸಹಿ/–
(ಪ್ರೊ. ಬಿ.ಪಿ. ವೀರಭದ್ರಪ್ಪ)
**ಕುಲಪತಿಗಳು ಹಾಗೂ ಅಧ್ಯಕ್ಷರು**